ಇಷ್ಟವಿಲ್ಲದಿದ್ದರೂ ಎಲ್ಲರೂ ಅವಳ ಮಾತನ್ನು ಒಪ್ಪಿಕೊಂಡರು.

ಮಾರನೇ ದಿನವೇ ಸತ್ಯವತಿ ಸುಬ್ಬಾರಾಯಪ್ಪನಿಗೆ ಹೇಳಿಕಳುಹಿಸಿದಳು.

ಎರಡು ದಿವಸಗಳಲ್ಲಿ ಬರ್ತೀನಿ ಅಂತ ಹೇಳಿ ಹೋಗಿದ್ದ ಸುಬ್ಬಾರಾಯ ನಾಲ್ಕು ದಿವಸಗಳಾದರೂ ಬರಲಿಲ್ಲ. ಐದನೇ ದಿವಸ ಸತ್ಯವತಿ ಮನೆಗೆ ಬಂದ. ಬರ್ತಿದ್ದಹಾಗೆ ಹೇಳಿದ.

"ನೀನು ತುಂಬಾ ಅದೃಷ್ಟವಂತೆ ಸತ್ಯವತಿ. ನೀನು ಕೇಳಿದಂತೆ ಅವರು ಆರು ಲಕ್ಷ ಕೊಡೋದಿಕ್ಕೆ ಒಪ್ಪಿಕೊಂಡ್ರು. ತಗೋ ಈ ಹತ್ತುಸಾವಿರ, ನಿನಗೆ ಅಡ್ವಾನ್ಸಾಗಿ ಕೊಟ್ಟಿದಾರೆ. ನಿಂಗೊಂದು ಸೆಲ್‌ಫೋನು, ಏಸಿ ಬಸ್ಸಿನಲ್ಲಿ ಟಿಕೆಟ್ ಬುಕ್ ಮಾಡೋದಕ್ಕೆ ಹೇಳಿದಾರೆ... ಅವ್ರು ನಿಜವಾಗ್ಲೂ ಧರ್ಮರಾಯರೇ ಸತ್ಯವತಿ.''

"ಸುಬ್ಬರಾಯಪ್ಪಾ, ನಂಗೊಂದು ಅನುಮಾನ... ಅದೇನೋ ಪರೀಕ್ಷೆಗಳು ಮಾಡ್ಬೇಕು ಅಂತ ಹೇಳಿದ್ಯಲ್ಲಾ, ಒಂದ್ವೇಳೆ ನನ್ನ ಕಿಡ್ನಿ ಅವರಿಗೆ ಸರಿಹೋಗ್ಲಿಲ್ಲಾ ಅಂದ್ರೆ ಈ ಹತ್ಸಾವ್ರ ವಾಪಸ್ಸು ಕೊಡ್ಬೇಕಾಗುತ್ತಾ?" ಸತ್ಯವತಿ ತನ್ನ ಅನುಮಾನವನ್ನು ಅವನ ಮುಂದಿಟ್ಟಳು.

"ಇಲ್ಲ... ಕೊಡ್ಬೇಕಾಗಿಲ್ಲ."

"ಸರಿ ಹಾಗಾದ್ರೆ ಅವ್ರು ಆಪರೇಷನ್‌ಗೆ ಮುಂಚೇನೇ ಪೂರ್ತಿಹಣ ನಂಗೆ ಕೊಟ್ಬಿಡ್ಬೇಕು. ಒಂದು ಕಾಸು ಕಮ್ಮಿ ಆದ್ರೂ ನಾನು ಒಪ್ಪಿಕೊಳ್ಳೋದಿಲ್ಲ. ಇನ್ನು ನಿನ್ನ ಕಮಿಷನ್ನಿಗೂ ನಂಗೂ ಸಂಬಂಧವಿಲ್ಲ. ಗೊತ್ತಾಯ್ತಾ?..." ಖಡಾಖಂಡಿತವಾಗಿ ಹೇಳಿದಳು ಸತ್ಯವತಿ.

"ನಾನು ನಿನ್ನ ಈ ಒಂದು ಕೇಸಿನಲ್ಲಿ ಕಮಿಷನ್ ತಗೋಳೋದಿಲ್ಲ." ಎಂದ ಸುಬ್ಬಾರಾಯ.

ಮನೆಗೆ ಬೇಕಾದುದನ್ನೆಲ್ಲಾ ಒದಗಿಸಿ, ಒಳ್ಳೆಯ ದಿವಸ ಕೇಳಿ ಬಸ್ಸು ಹತ್ತಿದ್ದಳು ಸತ್ಯವತಿ.

★★★

"ಲಕಡೀಕಾ ಪೂಲ್... ಲಕಡೀಕಾ ಪೂಲ್... ಸ್ಟಾಪ್ ಅಮ್ಮಾ!... ನೀವು ಇಲ್ಲೇ ಇಳೀಬೇಕಿದೆ..." ಕಂಡಕ್ಟರ್ ಅಪ್ಪಯ್ಯ ಕೂಗಿ ಹೇಳಿದ.

ಸತ್ಯವತಿ ತನ್ನ ಬ್ಯಾಗನ್ನು ಹಿಡಿದು ಸರಸರನೆ ಬಸ್ಸಿನಿಂದ ಕೆಳಗಿಳಿದಳು.

"ಅಣ್ಣಾ ಟೈಂ ಎಷ್ಟು?" ಪಕ್ಕದಲ್ಲಿದ್ದವನನ್ನು ಕೇಳಿದಳು. ಅಷ್ಟರಲ್ಲಿ ಸೆಲ್ ರಿಂಗಾಗುತ್ತಿದ್ದುದನ್ನು ನೋಡಿ ಆನ್ ಮಾಡಿದಳು.

"ಅಮ್ಮಾ... ನಾನು ಡಾಕ್ಟರ್ ರಾಜು ಅವರ ಸ್ನೇಹಿತ ಮಾಧವರಾಯ. ನೀವು ಎಲ್ಲಿದ್ದೀರಿ?" ಅತ್ತಲಿಂದ ಕೇಳಿಬಂತು.

"ನಾನು ಈಗತಾನೆ ಬಸ್ಸಿನಿಂದ ಇಳಿದೆ ಕಣಪ್ಪ..."

"ಕೆಂಪು ಸೀರೆ ಉಟ್ಕೊಂಡಿರೋರು ನೀವೇನಾ... ಅಮ್ಮಾ?"

"ಹೌದು..."

"ನಾನು ಬರ್ತಿದೀನಿ. ನೀವು ಅಲ್ಲೇ ನಿಂತಿರಿ..." ಫೋನ್ ಕಟ್ಟಾಗಿತ್ತು.

ಮರು ನಿಮಿಷದಲ್ಲೇ ತೆಳ್ಳಗೆ ಎತ್ತರವಾಗಿದ್ದ ಐವತ್ತು ವರ್ಷದ ವ್ಯಕ್ತಿ ಅವಳನ್ನು ಸಮೀಪಿಸಿದರು.

"ಅಮ್ಮಾ... ನೀವೇನಾ ಸತ್ಯವತಿ?" ಕೇಳಿದ.

"ಹೌದು..." ಅನುಮಾನದಿಂದ ಆ ವ್ಯಕ್ತಿಯನ್ನು ನೋಡುತ್ತಾ ಹೇಳಿದಳು.

"ನಡೀರಮ್ಮಾ ಮನೆಗೆ ಹೋಗೋಣ..." ಎಂದವರೇ ಆಟೊ ಕರೆದು,

"ರೆಡ್‌ಹಿಲ್ಸ್‌ಗೆ ನಡಿ..." ಎಂದರು.

ಹತ್ತು ನಿಮಿಷಗಳಲ್ಲಿಯೇ ಒಂದು ದೊಡ್ಡ ಅಪಾರ್ಟ್‌ಮೆಂಟಿನ ಮುಂದೆ ರಿಕ್ಷಾ ನಿಂತಿತು. ಆಟೊಗೆ ದುಡ್ಡುಕೊಟ್ಟು ಕಳಿಸಿ, ಲಿಫ್ಟಿನಲ್ಲಿ ಸತ್ಯವತಿಯನ್ನು ಮೇಲಿನ ಅಂತಸ್ತಿಗೆ ಕರೆದುಕೊಂಡು ಹೋದರು.